ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ೩೧ನೇ ಮಾರ್ಚ್ ೧೯೮೪/ಚೈತ್ರ ೧೦ ೧೯೦೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಜಣಕಾರ್) ಅವರು ಪೀಠವನ್ನಲಂಕರಿಸಿದರು.]

ಸಭೆಯ ಮುಂದಿಡಲಾದ ಪ್ರಶ್ನೋತ್ತರಗಳು

ದಿನಾಂಕ ೩೦-೩-೮೪ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು (೧೩ನೇ ಪಟ್ಟಿ)

ಕೈಗಾರಿಕೆಗಳಿಗೆ ನೀಡಬೇಕಾದ ಬಾಕಿ ಸಹಾಯಧನ

೮೮೪. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).— ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೩೧-೧೨-೮೩ಕ್ಕೆ ರಾಜ್ಯದಲ್ಲಿ ಸ್ಥಾಪಿತವಾಗಿರುವ ಕೈಗಾರಿಕೆಗಳಿಗೆ ನೀಡಬೇಕಾ ಬಾಕಿ ಸಹಾಯಧನದ ಮೊತ್ತವೆಷ್ಟು ?

ಆ) ಇದನ್ನು ಯಾವಾಗ ಪಾವತಿ ಮಾಡಲಾಗುತ್ತದೆ ?

ಇ) ಈ ರೀತಿ ಬಿಡುಗಡೆ ಮಾಡಲಾಗದೇ ಇರುವುದರಿಂದ ಕೈಗಾರಿಕೆಗಳಿಗೆ ನಷ್ಟ ಉಂಟಾಗುವು ದಿಲ್ಲವೆ ?

ಈ) ಹಾಗಿದ್ದಲ್ಲಿ ಕೈಗಾರಿಕೆಗಳಿಗೆ ನಷ್ಟವನ್ನು ತಪ್ಪಿಸಲು ಸರ್ಕಾರವು ತೆಗೆದುಕೊಂಡ ಕ್ರಮ ಗಳೇನು ?

ಶ್ರೀ ವೀರಣ್ಣ (ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು).—

ಅ) ದಿನಾಂಕ ೩೧-೧೨-೮೩ಕ್ಕೆ ೧೭.೮೦ ಕೋಟಿ ರೂಗಳು ಕೈಗಾರಿಕೆಗಳಿಗೆ ಬಾಕಿ ಇರುತ್ತದೆ.

ಆ) ೧೯೮೪-೮೫ನೇ ಸಾಲಿನಲ್ಲಿ ೭ ಕೋಟಿ ರೂಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು ಈ ವಾರದ ಅಂತ್ಯದಲ್ಲಿ ಸಾಲ್ಕು ಕೋಟಿ ಸಾಲ್ಕು ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗುವುದು. ಉಳಿಕೆ ಬಾಕಿಯನ್ನು ೧೯೮೫-೮೦ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಇ) ರಾಜ್ಯ ಸರ್ಕಾರ ನೀಡುವುದು ಸಹಾಯ ಧನ ಮಾತ್ರವಾಗಿರುವುದರಿಂದ ಕೈಗಾರಿಕೆಗಳಿಗೆ ನಷ್ಟವಾಗುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಪುತ್ತೂರಿನಲ್ಲಿ ಕೆ. ಇ. ಬಿ. ಸಬ್ ಡಿವಿಜನ್ ಆಫೀಸು

೮೮೫. ಶ್ರೀ ವಿನಯಕುಮಾರ್ ಸೊರ್ಕೆ (ಪುತ್ತೂರು) —ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುತ್ತೂರು ತಾಲ್ಲೂಕು ಸಬ್ ಡಿವಿಜನ್ ಕೇಂದ್ರ ಸ್ಥಳವಾಗಿದ್ದು ವಿದ್ಯುತ್ ಇಲಾಖೆಯಿಂದ ಪುತ್ತೂರಿನಲ್ಲಿ ಸಬ್ ಡಿವಿಜನ್ ಆಫೀಸು ರೂಪಿಸಬೇಕು ಎನ್ನುವ ಬೇಡಿಕೆ ಸರ್ಕಾರದ ಮುಂದಿದೆಯೆ.